**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ**

C.C.NO.443/2017

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ | ಸಂತೋಷ | C.W – 2 |
| **ತಂದೆಯ ಹೆಸರು** | ಃ | ಆನಂತ್ ಪದ್ಮನಾಭ | P.W – 2 |
| **ವಯಸ್ಸು** | ಃ | **38** ವರ್ಷ | |
| **ಉದ್ಯೋಗ** | ಃ | ಖಾಸಗಿ ನೌಕರ | **ಪ್ರಮಾಣ ವಚನ ಬೋಧಿಸಲಾಯಿತು** |
| **ವಾಸ** | ಃ | ಚನ್ನರಾಯಪಟ್ಟಣ | **ದಿನಾಂಕಃ 09**-12-2019 |

---

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಕೃತ್ಯ ಸ್ಥಳ ಮತ್ತು ಅಮಾನತ್ ಮಹಜರ್ ಆಗಿದ್ದು ಅದನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು . ದಿನಾಂಕ 13-10-2016 ರಂದು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ . ಸದರಿ ಪೋಲೀಸರು ಚಿಕ್ಕಗೊಂಡನಹಳ್ಳಿ ಹತ್ತಿರ ಅಪಘಾತದ ವಿಚಾರವಾಗಿ ಪೋಲೀಸರು ಮಹಜರ್ ಮಾಡಿ ಒಂದು ಮಾರುತಿ 800 ಕಾರು ಹಾಗೂ ಒಂದು ಟಾಟಾ ಇಂಡಿಕಾ ಕಾರನ್ನು ಅಮಾನತ್ ಪಡಿಸಿಕೊಂಡಿರುತ್ತಾರೆ . ಸದರಿ ಅಮಾನತ್ ಮಹಜರ್ ನ್ನು 9-30 ರಿಂದ 10 ಗಂಟೆಯವರೆಗೆ ಬರೆದಿರುತ್ತಾರೆ . ಆ ಕಾಲಕ್ಕೆ ನಾನು ಮತ್ತು ನಾಗೇಶ್ ರವರು ಹಾಜರಿದ್ದೆವು. ಮಹಜರ್ ನಲ್ಲಿ ರುವ ವಿಚಾರಗಳನ್ನು ಓದಿ ತಿಳಿದು ಸಹಿಮಾಡಿರುತ್ತೇನೆ .

***(ಈ ಹಂತದಲ್ಲಿ ಸಾಕ್ಷಿಯನ್ನು*** *ಭಾಗಶಃ* ***ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

ಪಾಟೀ ಸವಾಲು ಃ- **ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

ಸದರಿ ಸಹಿಯನ್ನು ಅಪಘಾತದ ಸ್ಥಳದಲ್ಲಿ ಪೋಲಿಸರು ಮಹಜರ್ ಮಾಡಿದ ಸಮಯದಲ್ಲಿ ಹಾಕಿದ್ದೇನೆಂದರೆ ಸರಿ *.* ಸದರಿ ಕಾರುಗಳ ಸಂಖ್ಯೆ ಕೆಎ*-09*-ಎನ್*-742* ರ ಮಾರುತಿ ***800*** ಮತ್ತು ಕೆಎ*-02*-ಎಇ*-6912* ಇಂಡಿಕಾ ಕಾರು ಎಂದರೆ ಸರಿ *.*

**ಪಾಟೀ ಸವಾಲುಃ- ಈ ಹಂತರದಲ್ಲಿ ಆರೋಪಿ ಪರ ವಕೀಲರು ಗೈರುಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು .**

ಮರು ವಿಚಾರಣೆ ಃ- ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

(ಎಸ್.ಚಿನ್ನಸ್ವಾಮಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ